

ವಾಯಿದೆಯಂತೆ ವಾರಕ್ಕೆ ಎರಡು ಮೂರು ದಿನ ಅವು ಕಾಯಮ್ಮಾಗಿ ಇಲ್ಲಿಗೆ ಬಂದೇ ಹೋಗುತ್ತಿದ್ದವು. ಪ್ರಾಣಿಗಳ ಸುಪ್ತಪ್ರಜ್ಞೆಯಲ್ಲಿ ಅವುಗಳ ಪರಂಪರಾಗತ ದಾರಿ ಅಚ್ಚೊತ್ತಿರುವ ಸೂಚನೆಯಿದು.

ಬೆಟ್ಟದ ತುದಿಯ ಅವರ ಮನೆ ಎದುರು ನಿಂತರೆ ಸುಂದರ ಮೂನಾರ್ ಬೆಟ್ಟಗಳ ಸಾಲು ತಂಪಾಗಿ ಕಾಣುತ್ತಿತ್ತು. ಕಾಡುಕೋಳಿಗಳು, ವಿಷಲಿಂಗ್ ಥ್ರಶ್ ಪಕ್ಷಿಗಳು ಹೇರಳವಾಗಿದ್ದವು. "ಅಪರೂಪಕ್ಕೆ ಕಾಳಿಂಗ ಸರ್ಪಗಳು ಕಾಣುತ್ತವೆ. ಇಲ್ಲಿನ ಟೀ ಗಿಡಗಳ ಮಧ್ಯೆ ಅವುಗಳ ಓಡಾಟ ಸಾಮಾನ್ಯ" ಎಂದು ವೇದಾ ನಿರಾಳವಾಗಿ ಹೇಳಿದರು. ನಂತರ ನಾವು ಗ್ರೇಟರ್ ಹಾರ್ನ್ ಬಿಲ್ ಹಕ್ಕಿಗಳನ್ನು ನೋಡುವ ಬಯಕೆ ವ್ಯಕ್ತಪಡಿಸಿದೆವು. ವೇದಾ ಅವರ ಗಂಡ "ನನ್ನ ಪರಿಚಿತ ಗೆಳೆಯ ಮ್ಯಾನೇಜರ್ ಆಗಿರುವ ಟೀ ಎಸ್ಟೇಟ್ ದಟ್ಟ ಕಾನನದ ನಡುವೆ ಇದೆ. ಅಲ್ಲಿಗೆ ಹೋದರೆ ಅವು ಸಿಗಬಹುದು. ಇಲ್ಲಿಂದ ಒಂದು ಗಂಟೆಯ ದಾರಿ. ಯಾವುದಕ್ಕೂ ಮಾತಾಡಿ ವ್ಯವಸ್ಥೆ ಮಾಡಿಸುವೆ ಇರಿ" ಎಂದರು. ಸ್ವಲ್ಪ ಹೊತ್ತಿನಲ್ಲೇ ಅಲ್ಲಿಗೆ ಹೋಗುವ ಅವಕಾಶ ಸಿಕ್ಕಿತು. ತಿಂಡಿ ತಿಂದು ಸಿದ್ಧರಾದೆವು. ಆಗ ವೇದಾ "ನಾನು ಕೂಡ ಅವುಗಳನ್ನು ಇಲ್ಲಿಯತನಕ ನೋಡಿಲ್ಲ" ಎಂದು ತವಕ ಸೂಚಿಸಿದರು. "ಸರಿ ಹಾಗಾದರೆ ಇವರ ಜೊತೆ ನೀನು ಹೋಗು. ನನಗೆ ಟೀ ತೋಟದಲ್ಲಿ ಅರ್ಜೆಂಟ್ ಕೆಲಸವಿದೆ" ಎಂದು ಪತ್ನಿಗೆ ದಾರಿ ತೋರುಗೆಯ ಜವಾಬ್ದಾರಿ ಹೊರೆಸಿದರು.

ಮದುವೆಯಾಗಿ ಕೆಲವೇ ತಿಂಗಳಷ್ಟೇ ಆಗಿದ್ದ ಈ ಜೋಡಿ ನೇರವಾಗಿ ಬಂದು ವಾಲ್ಪರೈಯಲ್ಲಿ ನೆಲೆಸಿದ್ದರು. ವೇದಾ ತಂದೆ ತಾಯಿ ಕೊಡಗಿನವರು. ಅವರು ತುಂಬಾ ಸ್ನೇಹಪರರೆಂದೂ ತಮ್ಮ ಮಕ್ಕಳನ್ನೂ ಹಾಗೆ ಬೆಳೆಸಿದ್ದಾರೆಂದು ಉಮೇಶ್ ಹೇಳಿದ್ದು ನಿಜವೆನಿಸಿತು. ವೇದಾ ಅಹಂಭಾವ ಇಲ್ಲದ ಸರಳ ಹೆಣ್ಣುಮಗಳು. ಅದರಲ್ಲೂ ನಾವು ಕನ್ನಡ ನೆಲದಿಂದ ಬಂದಿದ್ದೇವೆ ಎಂಬ ಹೆಮ್ಮೆ ಆಕೆಗೆ. ತವರು ಮನೆಯಿಂದ ನನ್ನ ಅಣ್ಣಂದಿರು ಬಂದಿದ್ದಾರೆಂದು ಮನಬಿಚ್ಚಿ ನಕ್ಕು ಮನೆಗೆಲಸದವರಿಗೆ ಪರಿಚಯಿಸಿದರು.